**PRAJAVANI**

Date: Dec 05, 2015 Page: 3

Edition: Mysore Language: Kannada

‘ಕಾರ್ಯಸ್ಥಳದಲ್ಲಿ ಮಾನವಸಂಪನ್ಮೂಲ ನಿರ್ವಹಣೆ’ ಸಮ್ಮೇಳನ

# ಬೌದ್ಧಿಕ ಸಮೃದ್ಧ ಮಾನವ ಸಂಪನ್ಮೂಲಕ್ಕೆ ಆದ್ಯತೆ

ಪ್ರಜಾವಾಣಿ ವಾರ್ತೆ

ಮೈಸೂರು: ನವಯುಗದ ಅಗತ್ಯಗಳಿಗೆ ತಕ್ಕಂತೆ ಪ್ರತಿಭೆ, ಶಿಸ್ತು, ಸಮಯ ಪಾಲನೆ, ಸೃಜನಶೀಲತೆ, ನಾವೀನ್ಯತೆ ಮೈಗೂಡಿಸಿಕೊಂಡು ಮಾನವಸಂಪನ್ಮೂಲವನ್ನು ಸಜ್ಜುಗೊಳಿಸುವುದು ದೊಡ್ಡ ಸವಾಲು ಎಂದು ಇನ್ಫೊಸಿಸ್‌ನ ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷ ರಿಚರ್ಡ್ ಲೊಬೊ ಹೇಳಿದರು.

ನಗರದ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ‘ಕಾರ್ಯಸ್ಥಳದಲ್ಲಿ ಮಾನವಸಂಪನ್ಮೂಲ ನಿರ್ವಹಣೆ’ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಕಂಪೆನಿಗಳು ಬೌದ್ಧಿಕ ಸಮೃದ್ಧ ಮಾನವ ಸಂಪನ್ಮೂಲಕ್ಕೆ ಆದ್ಯತೆ ನೀಡುತ್ತಿವೆ. ಪ್ರತಿಭೆ ನಿರ್ವಹಣೆಯು ಮಹತ್ವದ ಸಂಗತಿಯಾಗಿದೆ. ಕೆಲಸದ ವ್ಯಾಖ್ಯಾನ ಬದಲಾಗಿಲ್ಲ. ಆದರೆ, ಕೆಲಸದಲ್ಲಿ ಮೌಲ್ಯವರ್ಧನೆ ಪ್ರಾಮುಖ್ಯತೆ ಪಡೆದಿದೆ. ಕಾರ್ಯನಿರ್ವಹಣೆಯಲ್ಲಿ ಸಿಬ್ಬಂದಿಯ ತಂತ್ರಗಾರಿಕೆ, ಕೌಶಲಗಳು ಮಹತ್ವ ಪಡೆದಿವೆ. ಹೊಸತನ್ನು ಸೃಷ್ಟಿಸುವ ಕ್ರಿಯಾಶೀಲತೆ, ನೈಪುಣ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.




ಮೈಸೂರಿನ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದ ವೇದಿಕೆಗೆ ಇನ್ಫೊಸಿಸ್‌ನ ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷ ರಿಚರ್ಡ್ ಲೊಬೊ, ಡಾ.ಮೌಶುಮಿ ಸೇನ್ ಗುಪ್ತ, ಡಾ.ಎನ್.ಆರ್. ಪರಶುರಾಮನ್ ಆಗಮಿಸಿದರು

ಗುರಿ ಸಾಧನೆಯಡೆಗೆ ಸಾಗುವ ಜಾಣ್ಮೆಯನ್ನು ಮೈಗೂಡಿಸಿಕೊಳ್ಳಬೇಕು. ತಂತ್ರಜ್ಞಾನ ಯುಗದ ಕ್ಷಿಪ್ರ ಬದಲಾವಣೆಗಳಿಗೆ ಹೊಂದಿಕೊಂಡು ಕಾರ್ಯನಿರ್ವಹಿಸುವ ಚಾಕಚಕ್ಯತೆ ರೂಢಿಸಿಕೊಳ್ಳಬೇಕು. ಗ್ರಾಹಕ ಕೇಂದ್ರಿತ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಸ್ಥೆಯನ್ನು ಮುನ್ನಡೆಸಬೇಕು. ಗ್ರಾಹಕ ಕೇಂದ್ರಿತ ಅಂಶಗಳು, ಸಿಬ್ಬಂದಿ ಬಾಂಧವ್ಯಗಳು ಮಾನವಸಂಪನ್ಮೂಲ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ವಿಶ್ಲೇಷಿಸಿದರು.

ಸಂಸ್ಥೆಯ ಸಂರಚನೆಯನ್ನು ತಿಳಿದುಕೊಳ್ಳಬೇಕು. ಆಧುನಿಕ ಜಗತ್ತಿನಲ್ಲಿ ಗ್ರಾಹಕರು ಸಂಸ್ಥೆಗಳಿಂದ ಉತ್ತಮ ಸೇವೆಯನ್ನು ನಿರೀಕ್ಷಿಸುತ್ತಾರೆ. ಈ ಉತ್ತಮ ಸೇವೆಯನ್ನು ನೀಡುವಂತೆ ಸಂಸ್ಥೆಯ ಮಾನವ ಸಂಪನ್ಮೂಲವನ್ನು ಸಜ್ಜುಗೊಳಿಸಬೇಕು. ಸೇವೆಗೆ ತಕ್ಕಂತೆ ಹಣ ನೀಡಲು ಗ್ರಾಹಕರು ಸಿದ್ಧರಿರುತ್ತಾರೆ. ಸಂಸ್ಥೆಯ ಭವಿಷ್ಯದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಅನ್ವೇಷಣೆ ಪಥದಲ್ಲಿ ಸಿಬ್ಬಂದಿಯನ್ನು ಮುನ್ನಡೆಸಬೇಕು. ನವ ಆಯಾಮಗಳನ್ನು ಸೃಷ್ಟಿಸಬೇಕು. ಉದ್ದೇಶ ಸಾಧನೆ ನಿಟ್ಟಿನಲ್ಲಿ ಸೃಜನಶೀಲತೆ ಮೈಗೂಡಿಸಿಕೊಂಡು ಮುನ್ನಡೆಯುವ ಮಾರ್ಗವನ್ನು ಕಲಿಸಬೇಕು ಎಂದು ವಿವರಿಸಿದರು.

ಸಮ್ಮೇಳನವು ಶನಿವಾರವೂ ಮುಂದುವರಿಯಲಿದೆ. ಬಾಂಗ್ಲಾದೇಶ, ಶ್ರೀಲಂಕಾ, ಮಾಲ್ಡೀವ್ಸ್, ನೈಜಿರಿಯಾ ದೇಶಗಳ ಶಿಕ್ಷಣತಜ್ಞರು, ಸಂಶೋಧಕರು, ಉದ್ಯಮ ಸಲಹೆಗಾರರು ಪಾಲ್ಗೊಂಡಿದ್ದರು. ಸಮ್ಮೇಳನದಲ್ಲಿ 185 ಸಂಶೋಧನಾ ಪ್ರಬಂಧಗಳು ಮಂಡನೆಯಾಗಲಿವೆ.

ಸಮ್ಮೇಳನ ಸಂಚಾಲಕಿ ಡಾ.ಮೌಶುಮಿ ಸೇನ್ ಗುಪ್ತ, ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಡಾ.ನೀಲಾಂಜನ್ ಸೇನ್‌ಗುಪ್ತ ಇದ್ದರು.

**ಮುಖ್ಯಾಂಶಗಳು**

- 185 ಸಂಶೋಧನಾ ಪ್ರಬಂಧ ಮಂಡನೆ
- ಅನ್ವೇಷಣೆ ಪಥದಲ್ಲಿ ಸಿಬ್ಬಂದಿ ಮುನ್ನಡೆಸಲು ಸಲಹೆ
- ಮೌಲ್ಯವರ್ಧಿತ ಕಾರ್ಯನಿರ್ವಹಣೆ ಅಗತ್ಯ